ಸು.ರಂ. ಎಕ್ಕುಂಡಿ ಅಲ್ಲದೆ ಪಿ. ಲಂಕೇಶರ ಒಂದೆರಡು ಕವಿತೆಗಳನ್ನು ಬಿಟ್ಟರೆ ಉಳಿದವರಿಂದ ನಾನು ಕಲಿಯುವಂಥದ್ದೇನಿಲ್ಲ ಅಂತ ಅನ್ನಿಸಿಬಿಟ್ಟಿತು. ನಾನು ಕವಿತೆ ಬರೆಯಲು ತೊಡಗಿದ್ದಾಗ ಕನ್ನಡದಲ್ಲಿ ಲೈಂಗಿಕ ಪ್ರಧಾನ ಪ್ರಜ್ಞೆಯ ಕಾವ್ಯ ಕಣ್ಣಿಗೆ ರಾಚುತಿತ್ತು. ಒಂಥರದ ಫ್ರಾಯ್ಡಿಯನ್ ಕಾವ್ಯವದು. ಡಿ.ಎಚ್. ಲಾರೆನ್ಸ್ ಪ್ರಭಾವದಿಂದ ಕೂಡಿದ್ದ ಕಾವ್ಯ. ಯಾಕೋ ಈ ಕಾವ್ಯ ನನಗೆ ಹಿಡಿಸ್ಲಿಲ್ಲ. ಈ ತರಹದ ಅಬ್ಸೆಷನ್ ನನಗೆ ಇಷ್ಟ ಆಗೋದಿಲ್ಲ. ನನ್ನ ಮನಸ್ಸು ಶೇಕ್ಸ್‌ಪಿಯರ್‌ನಲ್ಲಿ ನೆಲೆಸಿತ್ತು. ಅವನಂತೆ ಅನೇಕ ಸತ್ಯಗಳನ್ನ, ಅನುಭವ ಸಾಧ್ಯತೆಗಳನ್ನ ಹುಡುಕ್ತಾ ಇತ್ತು. ಅನೇಕ ರೀತಿಯ ಶೈಲಿಗಳನ್ನ ಅರಸ್ತಾ ಇದ್ದೆ. ಹೀಗಾಗಿ ನವೋದಯದವರ ನಂತರ ನವ್ಯರಲ್ಲಿ, ಬಂಡಾಯದವರಲ್ಲಿ ಅನೇಕರು ಸಿದ್ಧಿಗಿಂತ ಹೆಚ್ಚು ಪ್ರಸಿದ್ಧಿಯನ್ನು ಪಡೆದರು. ಅವರ ಭಾಷೆ, ಶೈಲಿಗೆ ಬಹುಕುಳತೆಯೇ ಇಲ್ಲ. ಕುಮಾರವ್ಯಾಸ ಹೇಗೆ ಅನೇಕ ತರದಲ್ಲಿ ಮಾತಾಡ್ತಾನೊ, ಬಸವಣ್ಣನ ವಚನಗಳ ಬಹುಕುಳ ಶೈಲಿ, ಆ ರೀತಿಯ ವೈವಿಧ್ಯಮಯ ಶೈಲಿಯನ್ನು ತರುವಲ್ಲಿ ಇವರೆಲ್ಲ ಸೋತರು. ನನ್ನ ದೃಷ್ಟಿಯಲ್ಲಿ ನವ್ಯ ಮತ್ತು ಬಂಡಾಯ ಕಾವ್ಯಗಳೆರಡೂ ಕನ್ನಡ ಕಾವ್ಯದ ಭಾಷೆ, ಭಾವ ಮತ್ತು ಲೋಕದೃಷ್ಟಿಯನ್ನು ಕುಗ್ಗಿಸಿದವು. ನಾನು 'ಮಿಲರೇಪ' ಬರೆದಾಗ ನವ್ಯರಿಗೆ ಆ ನುಡಿಗಟ್ಟು ಇನ್ನೂ ಅಪರಿಚಿತವಾಗಿತ್ತು. 'ಮಳೆಬಿದ್ದ ನೆಲದಲ್ಲಿ' ಸಂಕಲನದೊಳಗೆ ನಾನು ದೀರ್ಘ ಕವಿತೆಗಳನ್ನು ಬರೆಯಲು ಶುರುಮಾಡಿದ್ದೆ. ನಾನು 'ಅಣು ಕ್ಷಣ ಚರಿತೆ' ಬರೆದಾಗ ನನ್ನ ಮೇಲೆ ದೊಡ್ಡ ಪ್ರಭಾವ ಉಂಟು ಮಾಡಿದ್ದು ಹಿಂದಿ ಕವಿ ಮುಕ್ತಿಬೋಧ್. ಲ್ಯಾಟಿನ್ ಅಮೆರಿಕನ್ ಕವಿಗಳ ಪ್ರಭಾವ ಕೂಡ ಇತ್ತು. ನಾನು ಹುಚ್ಚಿಗೆ



'ಕಾವ್ಯದ ಗಾತ್ರ ಮುಖ್ಯವಲ್ಲ ಗುಣ ಮುಖ್ಯ. ವಚನಕಾರರದೆಷ್ಟಿದೆ ಬರಹ? ಬಸವಣ್ಣನದು? ಅಕ್ಕನದು? ಅಲ್ಲಮನದು? ಎಲ್ಲ ಸೇರಿದರೆ ಒಬ್ಬೊಬ್ಬರದು ಇನ್ನೂರು ಪುಟವೂ ದಾಟೋದಿಲ್ಲ. ಆದ್ರೆ ಇವರ ಕಾವ್ಯ ಯಾವ ಮಹಾಕಾವ್ಯಕ್ಕಿಂತ ಕಮ್ಮಿ ಇದೆ!